

# ಸ್ಟೈಲಿಷ್ ಲೇಡಿಸ್ ವಾಚ್

ಉಮಾ ಅನಂತ್

ನೀವು ಇವತ್ತು ಯಾವ ಮೂಡ್‌ನಲ್ಲಿ ಇದ್ದೀರಿ..? ಡ್ರೆಸ್ಸಿಂಗ್, ಕ್ಯಾಷುವಲ್, ಸ್ಪೋರ್ಟಿ.. ಇಲ್ಲಿದೆ ವೆರೈಟಿ ಆಫ್ ಸ್ಟೈಲಿಷ್ ಲೇಡಿಸ್ ವಾಚ್.. ನಿಮ್ಮ ಡ್ರೆಸ್, ಮೂಡ್, ಸ್ಪೋರ್ಟಿವ್‌ನೆಸ್‌ಗೆ ಸೂಟ್ ಆಗುವಂಥದ್ದು..!

ಲೇಡಿಸ್ ವಾಚ್ ಸಂಗ್ರಹಿಸುವವರನ್ನು ಒಮ್ಮೆ ನೋಡಿ. ಎಷ್ಟು ವೆರೈಟಿ, ಡಿಸೈನ್, ಶೇಡ್, ಬಣ್ಣ, ಗಾತ್ರಗಳ ವಾಚ್ ಇವೆ ಎಂದು..? ವಿವಿಧ ಬ್ರಾಂಡ್‌ಗಳ, ಸ್ಟೈಲ್‌ನ ವಾಚ್‌ಗಳು ಇಂದು ಫ್ಯಾಷನ್‌ಪ್ರಿಯರನ್ನು ಮೋಡಿ ಮಾಡುತ್ತಿವೆ. ಜನಪ್ರಿಯ ಕಂಪೆನಿಗಳಾದ ಟೈಟಾನ್, ಎಚ್‌ಎಂಟಿಗಳಲ್ಲದೆ ಫಾಸಿಲ್, ಗೆಸ್, ಟೈಮೆಕ್ಸ್, ಸಿಟಿಜನ್, ಸ್ವಾರ್, ರೀಗಲ್, ಸೀಕೊ, ಕೆನಿತ್‌ಕೋಲ್, ಸ್ವಿಸ್, ಬುಲೊವ, ಕ್ಯಾಸಿಯೊ, ಫೆಂಡಿ, ಕ್ಲಾಸಿಕ್, ಒಮೇಗಾ, ಟ್ಯಾಗ್ ಹೂವರ್, ರೋಲೆಕ್ಸ್... ಅಬ್ಬಬ್ಬಾ.. ಇನ್ನೆಷ್ಟು ಕಂಪೆನಿಗಳ ಲೇಡಿಸ್ ವಾಚ್ ಬೇಕು..?

ಡ್ರೆಸ್‌ಗೆ ಮ್ಯಾಚ್ ಆಗುವಂಥ, ವಿವಿಧ ಶೇಪ್, ಡಿಸೈನ್, ಗಾತ್ರ, ಸ್ಟ್ರಾಪ್ ಇರುವಂಥ, ಚೈನ್ ಇರುವಂಥ ನಾನಾ ನಮೂನೆ ವಾಚುಗಳು ಇಂದು ಫ್ಯಾಷನ್ ಪ್ರಿಯರಿಗೆ ಲಭ್ಯ. ಬಹುಕಾಲ ಬಾಳಿಕೆ ಬರುವ ಡ್ಯೂರೇಬಿಲಿಟಿ ವಾಚ್, ಯೂಸ್ ಅಂಡ್ ಥ್ರೋ ವಾಚ್‌ಗಳು ಬರೀ ಸಮಯವನ್ನಷ್ಟೇ ಅಲ್ಲ, ದಿನಾಂಕ, ದಿನ, ನಿಮಿಷ, ಸೆಕೆಂಡ್, ದಿಕ್ಕು, ದಿಕ್ಸೂಚಿ ಇರುವಂಥ ಅಡ್ವಾನ್ಸ್ಡ್ ಮಾಡೆಲ್ ವಾಚ್‌ಗಳು ಸಿಗುತ್ತವೆ.



## ಟ್ರೆಂಡಿ ವಾಚ್

ಫ್ಯಾಷನೇಬಲ್ ಆಗಿರುವ ಟ್ರೆಂಡಿ ವಾಚ್‌ಗಳು ಇಂದು ಫ್ಯಾಷನ್‌ಪ್ರಿಯರ ಮನತಣಿಸಿದೆ. ಟೈಂ ನೋಡುವ ಒಂದೇ ಉದ್ದೇಶದಿಂದ ಇಂದು ಯುವತಿಯರು ವಾಚ್ ಕಟ್ಟಿಕೊಳ್ಳುವುದಲ್ಲ; ಫ್ಯಾಷನ್ ಹುಚ್ಚಿನಿಂದ ಎಂಬುದೂ ಇವರು ಕಟ್ಟಿಕೊಳ್ಳುವ ವಾಚುಗಳಿಂದ ಸಾಬೀತಾಗುತ್ತದೆ. ಇವರದೇ ಅಭಿರುಚಿ, ಆಸಕ್ತಿಗೆ ತಕ್ಕುದಾದ ವಾಚುಗಳೂ ಸಿಗುತ್ತಿದೆ.

ವಜ್ರ, ಚಿನ್ನ, ಪ್ಲಾಟಿನಂ, ಗೋಲ್ಡ್ ಕೋಟೆಡ್, ಮೆಟಲ್, ಗನ್ ಮೆಟಲ್, ಸೆರಾಮಿಕ್, ಸ್ಟೈನ್‌ಲೆಸ್ ಸ್ಟೀಲ್, ರಬ್ಬರ್, ಪ್ಲಾಸ್ಟಿಕ್, ಗಾಜು, ಲೆದರ್ ಮುಂತಾದ ವಸ್ತುಗಳನ್ನು ಬಳಸಿ ತಯಾರಿಸಿದ ಈ ವಾಚುಗಳು ವಿವಿಧ ಬೆಲೆಯಲ್ಲಿ ಲಭ್ಯ. ದೊಡ್ಡ ದೊಡ್ಡ ಡಯಲ್ ಇರುವ, ಬಣ್ಣ ಬಣ್ಣದ ಬೆಲ್ಟ್ ಇರುವ ವಾಚುಗಳನ್ನು ಕಟ್ಟಿಕೊಳ್ಳುವುದು ಈಗಿನ ಟ್ರೆಂಡ್. 100–150 ರೂಪಾಯಿಗಳಿಂದು 6–7 ಸಾವಿರ ರೂಪಾಯಿಗೆ ಸಿಗುವ ಈ ವಾಚುಗಳು ಯೂಸರ್ಸ್ ಫ್ರೆಂಡ್ಲಿ ಆಗಿರುವುದರಿಂದ ಯುವತಿಯರೂ ಇದನ್ನೇ ಇಷ್ಟ ಪಡುತ್ತಾರೆ.

## ಅದ್ಭುತ ಸಂಗ್ರಹ



ಟೈಟಾನ್ ಕಂಪೆನಿಯ ವಿವಿಧ ವೆರೈಟಿ ವಾಚುಗಳು ಹೊಸದಾಗಿ ಬಂದಿವೆ. ಟೈಟಾನ್ ಫ್ಲೋರಾ, ಟೈಟಾನ್ ರಾಗ, ರಾಗ ಅಕ್ವಾ, 'ಟೈಟಾನ್ ಪರ್ಪಲ್' ಹೆಸರಿನ ವಾಚುಗಳು ಒಂದಕ್ಕಿಂತ ಒಂದು ಸುಂದರವಾಗಿವೆ. ಇವೆಲ್ಲದರಲ್ಲಿ 'ಟೈಟಾನ್ ರಾಗ' ಅತ್ಯಂತ ವೇಗವಾಗಿ ಮತ್ತು ಹೆಚ್ಚು ಮಾರಾಟವಾಗುತ್ತಿದೆ. ಈ ವಾಚುಗಳು 1,895 ರೂಪಾಯಿಯಿಂದ ಹಿಡಿದು 8,490 ರೂಪಾಯಿವರೆಗೆ ಇದೆ. ಟೈಟಾನ್ ಪರ್ಪಲ್ ಕೂಡ ಇಂದು ಹೆಚ್ಚಿನ ಯುವತಿಯರು ಇಷ್ಟಪಡುತ್ತಾರೆ. ಇದರಲ್ಲಿ ನೀಲಿ, ಕಿತ್ತಳೆ, ಹಳದಿ, ಬಿಳಿ ಬಣ್ಣದ ವಾಚುಗಳು ಲಭ್ಯ ಎನ್ನುತ್ತಾರೆ ಬೆಂಗಳೂರು ಸೆಂಟ್ರಲ್ ಮಾಲ್‌ನ ವಾಚ್ ಮಳಿಗೆಯಲ್ಲಿ ಸೇಲ್ಸ್‌ಮ್ಯಾನ್ ಅಬ್ದುಲ್ ಖಾಲಿದ್.

ಇದಲ್ಲದೆ ಜರ್ಮನ್ ಮೂಲದ ಹ್ಯೂಗೊ ಬಾಸ್, ಫಾಸ್ಟ್ರಾಕ್, ಕ್ಯಾಸಿಯೊ, ಗೆಸ್, ಎಸ್ಪ್ರಿಟ್, ಕೆನಿತ್‌ಕೋಲ್, ಪೋಲಿಸ್ ಮುಂತಾದ ಕಂಪೆನಿಗಳ ಲೇಡಿಸ್ ವಾಚುಗಳು ನೋಡಲೂ ಸುಂದರವಾಗಿದ್ದು, ಯುವತಿಯರೂ ಈ ಫ್ಯಾಷನೇಬಲ್ ವಾಚುಗಳಿಗೇ ಮುಗಿ ಬೀಳುತ್ತಿದ್ದಾರೆ ಎನ್ನುತ್ತಾರೆ.

ಆಸ್ಪಿನ್ ಕಂಪೆನಿ ಯುವತಿಯರಿಗಾಗಿಯೇ ವಿಶೇಷವಾಗಿ ವೈವಿಧ್ಯಮಯ ವಿನ್ಯಾಸದ ವಾಚುಗಳನ್ನು ಹೊರತಂದಿದೆ ಎನ್ನುವ ಇದೇ ಮಳಿಗೆಯ ಮುಖ್ಯಸ್ಥ ಎಸ್.ಕೆ.ಜಾವೇದ್, ಇದು ಸೆರಾಮಿಕ್‌ನಿಂದ ತಯಾರಾಗಿದ್ದು, ಪಾರ್ಟಿವೇರ್, ಕ್ಯಾಷುವಲ್‌ವೇರ್ ಎರಡಕ್ಕೂ ಸೂಕ್ತವಾಗಿದೆ. 3,000 ರೂಪಾಯಿಗಳಿಂದ 14,000 ರೂಪಾಯಿವರೆಗಿನ ವಾಚುಗಳಿವೆ. ವಾರಕ್ಕೆ 30–35 ವಾಚುಗಳು ಮಾರಾಟವಾಗುತ್ತದೆ ಎಂದು ವಿವರಿಸುತ್ತಾರೆ. ಜತೆಗೆ ಕೆನಿತ್‌ಕೋಲ್ ಕಂಪೆನಿಯ ವಾಚುಗಳು ಗನ್ ಮೆಟಲ್‌ನಿಂದ ತಯಾರಿಸಲಾಗಿದ್ದು, ಬೆಲೆ 10,500 ರೂಪಾಯಿಗಳಿಂದ ಆರಂಭವಾಗುತ್ತದೆ. ಇದು ದೀರ್ಘ ಕಾಲ ಬಾಳಿಕೆ ಬರುವಂಥವು ಎನ್ನುತ್ತಾರೆ ಅವರು.

ವಿವಿಧ ಕಂಪೆನಿಗಳು ಹೊರ ತಂದಿರುವ ವಾಚುಗಳಿಗೆ ಸೆಲೆಬ್ರಿಟಿಗಳಾದ ಪ್ರಿಯಾಂಕ ಛೋಪ್ರ, ದೀಪಿಕಾ ಪಡುಕೋಣೆ, ಐಶ್ವರ್ಯ ರೈ ಪ್ರಚಾರ ರಾಯಭಾರಿ (ಬ್ರಾಂಡ್ ಅಂಬಾಸಿಡರ್) ಆಗಿದ್ದಾರೆ. ಸ್ಟೈಲಿಷ್ ವಾಚುಗಳನ್ನು ಅನಾವರಣಗೊಳಿಸುವ ಮೂಲಕ ಮಾರುಕಟ್ಟೆಗೆ ಬಿಡುಗಡೆ ಮಾಡಿ ವಾಚುಗಳಿಗೆ ಅದ್ದೂರಿ ಪ್ರಚಾರವೂ ಸಿಕ್ಕಿದಂತಾಗಿದೆ.

ವಾಚು ಯಾವುದಾದರೇನು..? ಸಮಯ ನೋಡಿದರಾಯಿತು ಎನ್ನುವ ಕಾಲ ಹೋಗಿದೆ. ಈಗ ಏನಿದ್ದರೂ ಕ್ರೇಜ್, ಸ್ಟೈಲಿಷ್, ಲೈಟ್‌ವೈಟ್, ಮಲ್ಟಿ ಫಂಕ್ಷನಿಂಗ್, ಪ್ರೀಮಿಯಂ ಬ್ರಾಂಡ್‌ನ ವಾಚುಗಳಿಗೇ ಆದ್ಯತೆ. ಫ್ಯಾಷನ್‌ಪ್ರಿಯರ ತಾಳಕ್ಕೆ ತಕ್ಕಂತೆ ವಾಚು ಕಂಪೆನಿಗಳೂ ಕುಣಿಯುತ್ತಿವೆ; ಆಸೆ ಪೂರೈಸುವತ್ತ, ಲಾಭ ಗಳಿಸುವತ್ತ ಗಮನವನ್ನೂ ಹರಿಸಿವೆ.